ಇ) *ಪ್ರಸ್ತುತ ವಿಧಾನ ಸಭಾ ಸದಸ್ಯರ ಅವಧಿಯು ಮುಗಿಯುವುರೊಳಗಾಗಿ ಹೊಸ ಜಿಲ್ಲೆಗಳನ್ನು ರಚನೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಈ ವಿಷಯ ಸಚಿವ ಸಂಪುಟದ ಉಪ-ಸಮಿತಿಯ ಪರಿಶೀಲನೆಯಲ್ಲಿದೆ. ಪರಿಶೀಲನೆಯ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಆ) ವಿಷಯ ಮುಖ್ಯ ಮತ್ತು ಗಂಭೀರವಾಗಿರುವ ಕಾರಣ, ಎಲ್ಲಾ ಶಿಫಾರಸ್ಸುಗಳು ಸಚಿವ ಸಂಪುಟದ ಉಪ-ಸಮಿತಿಯ ಪರಿಶೀಲನೆಯಲ್ಲಿದೆ.

ಇ) ಸಚಿವ ಸಂಪುಟದ ತೀರ್ಮಾನದ ನಂತರ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ನಗರ ಪ್ರದೇಶಗಳ ಜನರಿಗೆ ವಿಕರೂಪವಾದ ಕುಡಿಯುವ ನೀರಿನ ದರ

329 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿನ ನಗರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಸರಬರಾಜು ಮಾಡುವ ಕುಡಿಯುವ ನೀರಿನ ದರವನ್ನು ವಿಕರೂಪವಾಗಿ ಮಾಡುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಭರವಸೆ ಕೊಟ್ಟಿರುವುದು ನಿಜವೇ?*

ಆ) *ಹಾಗಿದ್ದಲ್ಲಿ ಯಾವಾಗ ಜಾರಿಯಲ್ಲಿ ತರಲಾಗುವುದು?*

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) ದಿನಾಂಕ : 1-4-95 ರಿಂದ ಜಾರಿಗೆ ತರಲಾಗುವುದು.

ಮೂಡಿಗೆರೆ ತಾಲ್ಲೂಕಿನಲ್ಲಿ ಗೃಹಮಂಡಳಿ ಮನೆಗಳ ಸಂಖ್ಯೆ

264 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೂಡಿಗೆರೆ ತಾಲ್ಲೂಕಿನಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಕಟ್ಟಲ್ಪಡುತ್ತಿರುವ ಮನೆಗಳೆಷ್ಟು?*

ಆ) *ಯಾವಾಗ ಮಂಜೂರು ಮಾಡಲಾಯಿತು? ಇವುಗಳ ಕೆಲಸ ಬಹಳ ಮಂದಗತಿಯಲ್ಲಿ ನಡೆಯಲು ಕಾರಣವೇನು?*

ಶ್ರೀ ಗೋಪಿನಾಥ ಸಾಂಡ್ರಾ (ವಸತಿ ಸಚಿವರು) :

ಅ) 41 (ನಲವತ್ತೊಂದು)

ಆ) 1989-90 ರಲ್ಲಿ ಮಂಜೂರು ಮಾಡಲಾಯಿತು. 22-6-90 ರಲ್ಲಿ ಕಾಮಗಾರಿ ಪ್ರಾರಂಭ ಮಾಡಲಾಯಿತು. ಕಾಮಗಾರಿಯ ಕೆಲಸ ಪ್ರಾರಂಭಿಸಿದ ನಂತರ ಮಣ್ಣಿನ ಗುಣಮಟ್ಟದಲ್ಲಿ ನ್ಯೂನತೆ ಕಂಡು ಬಂದು ವಿವರವಾದ ಮಣ್ಣಿನ ಪರೀಕ್ಷೆ ಮಾಡಲಾಗಿ ತಳಪಾಯದ ವಿಶಿಷ್ಟ ವಿವರಣೆಯನ್ನು ಮಾರ್ಪಾಡು ಮಾಡಲಾಗಿರುವುದರಿಂದ, ಕಾಮಗಾರಿ ವಿಳಂಬವಾಗಿರುತ್ತದೆ ಹಾಗೂ ಕಬ್ಬಿಣ ಮತ್ತು ಸಿಮೆಂಟ್ ಒದಗಿಸಲು ಕೆಲಕಾಲ ವಿಳಂಬವಾಗಿರುತ್ತದೆ. ಗುತ್ತಿಗೆದಾರರು ಕರಾರಿನ ದರದಂತೆ ಕೆಲಸ ಮುಂದುವರೆಸಲು ಮುಂದೆ ಬಾರದೆ ಹೆಚ್ಚಿಗೆ ದರವನ್ನು ಕೇಳುತ್ತಿರುತ್ತಾರೆ.

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಬೀದರ್‌ನಲ್ಲಿ ಸಣ್ಣ ಉದ್ದಿಮೆ ಪ್ರಾರಂಭಿಸಲು ನೀಡಿರುವ ಹಣಕಾಸಿನ ಬಗ್ಗೆ

275 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?